

# ಲೆದರಿ ಫರ್ನ್!

■ ಸೌಖ್ಯ ಮೋಹನ್
ಚಿತ್ರ: ಸಜನ್

ನೀವು ಗುಲಾಬಿ ಗ್ಲಾಡಿಯೋಲಿಸ್, ತೂಜಾ, ಆಂಥೋರಿಯಂ ಇತ್ಯಾದಿಗಳನ್ನು ಪುಷ್ಪಗುಚ್ಛಗಳಲ್ಲಿ ಬಳಸುವುದನ್ನು ನೋಡಿರುತ್ತೀರಿ. ಆದರೆ ಇತ್ತೀಚೆಗೆ ಹೆಚ್ಚು ಪ್ರಚಲಿತ ಹೊಂದುತ್ತಿರುವ ಈ 'ಲೆದರಿ ಫರ್ನ್' ಬಹಳ ವಿಶೇಷ. ಇದೊಂದು ಅಲಂಕಾರಿಕ ಜರಿ ಸಸ್ಯ. ಇದರ ಎಲೆಗಳು ದೀರ್ಘಕಾಲ ತಾಜಾತನ ಹೊಂದಿರುತ್ತವೆ. ಆದ್ದರಿಂದಲೇ ನೈಜ ಹೂಗಳ ಜೋಡಣೆಯಲ್ಲಿ ಬಳಸುತ್ತಾರೆ. ಈಗ ಹೋಟೆಲ್‌ಗಳು, ರೆಸಾರ್ಟ್‌ಗಳಲ್ಲಿ ಅಲಂಕಾರಿಕ ಗಿಡವಾಗಿ ಬಳಸುತ್ತಿದ್ದಾರೆ.

ಇದು ಪಾಲಿಪೋಡಿಯೇಸಿ ಎನ್ನುವ ಕುಟುಂಬಕ್ಕೆ ಸೇರಿದ್ದು. ನೋಡಲು ಅಡಿಕೆ ತೋಟ ಇತ್ಯಾದಿ ತಂಪಿರುವ ಜಾಗದಲ್ಲಿ ಬೆಳೆಯುವ ಮಾಮೂಲಿ ಜರಿ ಸಸ್ಯದ ಹಾಗೆ ಕಂಡರೂ ಎಲೆಗಳು ಮುಟ್ಟಲು ಗಟ್ಟಿ ಪ್ಲಾಸ್ಟಿಕ್ ತರಹ.

ನಮ್ಮ ರಾಜ್ಯದಲ್ಲಿ ಕೊಡಗು ಜಿಲ್ಲೆಯ ತಂಪಿನ ವಾತಾವರಣ ಇದಕ್ಕೆ ಹೇಳಿ ಮಾಡಿಸಿದ ಹವಾಮಾನ. ಹಾಗಾಗಿ ಇದನ್ನು ಸದ್ಯ ಕೊಡಗಿನ ಯುವಕಪಾಡಿ ಗ್ರಾಮದ ಕಬ್ಬಿನಕಾಡು ಎಸ್ಟೇಟಿನಲ್ಲಿ ಬೆಳೆಯುತ್ತಿದ್ದಾರೆ. ಅಗ್ರಿ ಅನ್ ಲಿಮಿಟೆಡ್ ಕಂಪನಿ ಬೈಬ್ಯಾಕ್ ಸಿಸ್ಟಮ್‌ನ ಮೂಲಕ ಕೊಳ್ಳುತ್ತಿದೆ. ಇದನ್ನು ಇಸ್ರೇಲ್ ಮತ್ತು ಕೀನ್ಯಾ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದಾರೆ. ವಾತಾವರಣದ ತೇವಾಂಶ ಕಡಿಮೆ ಇರುವ ಮಲೆನಾಡಿನ ಇತರ ತಾಲ್ಲೂಕುಗಳಾದ ಸಾಗರ, ತೀರ್ಥಹಳ್ಳಿ ಇತ್ಯಾದಿ ಇದಕ್ಕೆ ಅಷ್ಟೊಂದು ಸೂಕ್ತವಲ್ಲ ಹಾಗೂ ಉತ್ತಮ ಕ್ವಾಲಿಟಿ ಬರುವುದಿಲ್ಲ. ಆದರೆ ಶ್ರೀಲಂಕಾದಿಂದ ಆಮದು ಮಾಡಿಕೊಳ್ಳುವ ಲೆದರಿ ಫರ್ನ್‌ನ ಇನ್ನೊಂದು ಜಾತಿ ಮಲೆನಾಡಿನ ಇತರ ಭಾಗಗಳಲ್ಲಿ ಚೆನ್ನಾಗಿ ಬರುತ್ತದೆ ಎನ್ನುತ್ತಾರೆ. ಈ ಬೆಳೆಯ ಕೃಷಿಯನ್ನು ಉತ್ತೇಜಿಸುತ್ತಿರುವ ಅಗ್ರಿ ಅನ್ ಲಿಮಿಟೆಡ್ ಕಂಪನಿಯ ಕಾಳಿದಾಸ್ ರಾಜ್.

ಇದನ್ನು ಕುಂಡದಲ್ಲಿ ಬೆಳೆಯುವುದು ಸೂಕ್ತ. ಬೆಳೆಯುವುದು ಸುಲಭ ಕೂಡ. ನೀರು ಕಡಿಮೆ ಸಾಕು. ಕಿಲ್ಲು (ಹಿಳ್ಳು; ಸಕ್ಕರ್ಸ್) ಒಡೆಯುತ್ತದೆ. ಸರಿಯಾಗಿ ಆರೈಕೆ ಮಾಡಿದಲ್ಲಿ ಒಂದು ಗಿಡ 5-10 ವರ್ಷಗಳ ಕಾಲ ಇರುತ್ತದೆ. ಕೊಡಗಿನಲ್ಲಿ ಬೆಳೆಯುತ್ತಿರುವ ರೈತರ ಅಭಿಪ್ರಾಯ.

ಒಂದು ಎಸಳು ಅಥವಾ ಎಲೆಗೆ 2 ರೂಪಾಯಿ, ಗಿಡಕ್ಕೆ 50 ರೂಪಾಯಿ ಬೆಲೆಯಿದೆ. ಬೆಂಗಳೂರಿನಲ್ಲಿ ಒಳ್ಳೆಯ ಬೇಡಿಕೆ. ಜರೀ ಗಿಡಕ್ಕೂ ಭರ್ಜರಿ ದೆಸೆ. ನೀವೂ ಬೆಳೆಯಬಹುದಾ? (ಹೆಚ್ಚಿನ ಮಾಹಿತಿಗೆ: ಕಾಳಿದಾಸ್ ರಾಜ್ -9448478514).